# ಯಮಕನಮರಡಿಯ ಹುಣಸಿಕೊಳ್ಳಮಠಕ್ಕೆ ಉತ್ತರಾಧಿಕಾರಿಗಳಾಗಿ ಬಸವಚೇತನ ಶ್ರೀಗಳ ನೇಮಕ



ಯಮಕನಮರಡಿ:-ಹುಕ್ಕೇರಿ ತಾಲೂಕಿನ ವೀರಶೈವ ಮಠಗಳ ಪರಂಪರೆಯಲ್ಲೊಂದಾದ ಪ್ರಸಿದ್ದ ಹುಣಸಿಕೊಳ್ಳಮಠವನ್ನು ಈ ಹಿಂದೆ ಲಿಂಗೈಕ್ಯ ಶ್ರೀಗುರುಸಿದ್ದ ಮಹಾಸ್ವಾಮಿಗಳು ಉತ್ತುಂಗದತ್ತ ಬೆಳೆಸಿ ಸಮಾಜ ಸೇವೆಗೆ ಅನಯಾಗಿ ಇಂದಿಗೂ ಭಕ್ತರ ಅಂತರಾತ್ಮದಲ್ಲಿ ಉಳಿದುಕೊಂಡಿದ್ದಾರಲ್ಲದೆ ಸಾವಿರಾರೂ ಕುಟುಂಬಗಳಿಗೆ ಉತ್ತಮ ಮಾರ್ಗದರ್ಶನ ನೀಡಿ ಬದುಕನ್ನು ಹಸನಾಗಿಸಿದ್ದ ನದರ್ಶನಗಳಿವೆ, ಇಂಥ ದಿವ್ಯ ಪರಂಪರೆಯ ಶ್ರೀಮಠಕ್ಕೆ ತದನಂತರದಲ್ಲಿ ರಾಚೋಟಿಶ್ವರ ಮಹಾಸ್ವಾಮಿಗಳು ಪೀಠಾಧಿಪತಿಗಳಾಗಿ ಸೇವೆಗೈದು ಲಿಂ,ಗುರುಸಿದ್ದ ಮಹಾಸ್ವಾಮಿಗಳ 30 ನೇಯ ಪುಣ್ಯಸ್ಮರಣೆಯಂದು ಸಮೀಪದ ಹೆಬ್ಬಾಳದ ಬಸವಚೇತನ ಶ್ರೀಗಳನ್ನು ಸುಕ್ಷೇತ್ರ ಹುಣಸಿಕೊಳ್ಳಮಠದ ಉತ್ತರಾಧೀಕಾರಿಗಳನ್ನಾಗಿ ಕಮೀಟಿಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರು ಮತ್ತು ಭಕ್ತರ ಸಮ್ಮುಖದಲ್ಲಿ ನೇಮಿಸಲು ಚರ್ಚಿಸಿ ನಿರ್ಧರಿಸಲಾಯ್ತು ಬಸವ ಚೇತನ ಶ್ರೀಗಳಿಗೆ ಶ್ರೀಸಿದ್ದ ಬಸವ ಪ್ರಭು ಮಹಾಸ್ವಾಮಿಗಳಿಂದ ನಾಮಕರಣ ಮಾಡಿ ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಲಾಯ್ತು,

ಶ್ರೀಮಠದ ಆಡಳಿತ ಮಂಡಳಿಯ ಅಧ್ಯಕ್ಷರಾದ ಈರಣ್ಣಾ ವಿಸಿರೊಟ್ಟಿ,ಈರಣ್ಣಾ ದುಗ್ಗಾಣಿ, ಗಿರೀಶ ಮಿಶ್ರಕೋಟಿ, ಸಿದ್ದಪ್ಪಾ ಶಿಳ್ಳಿ, ಶಿವಶಂಕರ ರಘುಟ್ಟಿ, ಈರಣ್ಣಾ ಪಾವಟೆ, ಮಹಾಲಿಂಗ ಕುಂಬಾರ, ಅಶೋಕ ಮಲಕಾರ, ಲಕ್ಷ್ಮಣ ನಗಾರಿ, ಅರುಣ ಹಂದಿಗುಂದ, ದುಂಡಯ್ಯಾ ಹಿರೇಮಠ, ಉಪಸ್ಥಿತರಿದ್ದರು, ಪ್ರಕಾಶ ಅವಲಕ್ಕಿ, ಪ್ರಾಸ್ತಾವಿಕವಾಗಿ ಮಾತನಾಡಿದರು.

# ಪತ್ರಕರ್ತರ ಮಂಜು ಹುಡೆದ್ ಕಾರ್ಯಕ್ಕೆ ಮೆಚ್ಚುಗೆ..!



ಬೆಳಗಾವಿ: ಬೇಸಿಗೆಯಲ್ಲಿ ಪಕ್ಷಿಗಳಿಗೆ ನೀರಿನ ದಾಹ ಹೆಚ್ಚಾಗುತ್ತವೆ, ಅದರಿಂದ ಎಷ್ಟೋ ಪಕ್ಷಿಗಳು ಅಳುವಿನ ಅಂಚಿನಲ್ಲಿ ಬಂದಿದ್ದಾವೆ.

ಪಕ್ಷಿಗಳ ಜೀವ ಉಳಿಸುವ ಕಾರ್ಯ ಮಾನವ ಮಾಡಬೇಕಾಗಿದೆ, ಒಂದು ಗುಬ್ಬಚ್ಚಿ ನೀರು ಇಲ್ಲದೆ ನರಳಾಡುತ್ತಿತ್ತು ಅದನ್ನು ಕಂಡ ಪತ್ರಕರ್ತರ ಮಂಜು ಹುಡೆದ್ ಹಾಗೂ ಅವರ ಸ್ನೇಹಿತ ಇಮಾಮ್ ಗುಡುನ್ನವರ್ ಅವರು ಸಹಾಯಕ್ಕೆ ಮುಂದಾದರು. ವಡಗಾಂವ್‌ನಲ್ಲಿ ಗುಬ್ಬಚ್ಚಿ, ಗೋಚರವಾಗಿ ತೊಂದರೆಗೀಡಾದ ಮತ್ತು ಒಣಗಿ, ನೀರಿಲ್ಲದೆ ಕಷ್ಟಪಡುತ್ತಿರುವಾಗ, ಆಯಾಸದಿಂದ ನಡುಗುತ್ತಾ ರಸ್ತೆಗೆ ಬಿದ್ದಿತ್ತು ಅದನ್ನು ಮಂಜು ಹಾಗೂ ಸ್ನೇಹಿತರು ನೋಡಿದರು.ನಂತರ ಅವರು ಚಲಿಸಿದ ಅವರು ತಮ್ಮ ಪ್ರಯಾಣವನ್ನು ನಿಲ್ಲಿಸಿದರು ಮತ್ತು ಸಹಾಯಕ್ಕಾಗಿ ಹತ್ತಿರದ ದಾರಿಹೋಕರನ್ನು ತಲುಪಿದರು. ಕೈಯಲ್ಲಿ ನೀರಿಲ್ಲದಿದ್ದರೂ, ನಮ್ಮ ಬಾಯಾರಿಕೆಯನ್ನು ನೀಗಿಸಲು ನಾವು ನಮ್ಮ ಕೊನೆಯ ತಂಪು ಪಾನೀಯಗಳನ್ನು ಹಂಚಿಕೊಂಡರು. ಅದೃಷ್ಟವಶಾತ್, ಕರುಣಾಮಯಿ ಆತ್ಮವು ಹಾದುಹೋಗುವ ಅಗತ್ಯವಿರುವ ಹಕ್ಕಿಗೆ ನೀರನ್ನು ಒದಗಿಸಿತು ಎಂದು ಅಭಿಪ್ರಾಯಪಟ್ಟರು. ಇಂತಹ ಕ್ಷಣಗಳು ನಮಗೆ ಎಲ್ಲಾ ಜೀವಿಗಳ ಕಡೆಗೆ ಸಹಾನುಭೂತಿ ಮತ್ತು ಸಹಾನುಭೂತಿಯ ಪ್ರಾಮುಖ್ಯತೆಯನ್ನು ನೆನಪಿಸುತ್ತವೆ. ಗುಬ್ಬಚ್ಚಿಗಳಿಗೆ ಮಾತ್ರವಲ್ಲ, ನಮ್ಮ ಗ್ರಹವನ್ನು ಹಂಚಿಕೊಳ್ಳುವ ಎಲ್ಲಾ ಜೀವಿಗಳಿಗೆ ಪ್ರತಿದಿನವನ್ನು ದಯೆಯ ದಿನವನ್ನಾಗಿ ಮಾಡಲು ಶ್ರಮಿಸೋಣ.

# ರಾಷ್ಟ್ರಮಟ್ಟದ ಚಿತ್ರಕಲೋತ್ಸವ ಚಿಣ್ಣರ ಚಿತ್ರ ಚಿತ್ತಾರ ಸೆಂಟ್ ಮೇರಿಸ್ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿಗಳ ಸಾಧನೆ



ಗದಗ 20 : ಬಣ್ಣದ ಮನೆ ಸಾಂಸ್ಕೃತಿಕ ವೇದಿಕೆ ಹಾಗೂ ಕರ್ನಾಟಕ ಬಾಲ ವಿಕಾಸ ಅಕಾಡೆಮಿ ಧಾರವಾಡ ಇವರು ಆಯೋಜಿಸಿದ್ದ ರಾಷ್ಟ್ರಮಟ್ಟದ ಚಿತ್ರಕಲೋತ್ಸವ ಚಿಣ್ಣರ ಚಿತ್ರ ಚಿತ್ತಾರ ಸ್ಪರ್ಧೆಯಲ್ಲಿ ನಗರದ ಸೆಂಟ್ ಮೇರಿಸ್ ಆಂಗ್ಲ ಮಾಧ್ಯಮ ಶಾಲೆ ಹೆಲ್ತ್ ಕ್ಯಾಂಪ್ ಬೆಟಗೇರಿಯ ಒಟ್ಟು 198 ಮಕ್ಕಳು ಭಾಗವಹಿಸಿದ್ದರು. ಭಾಗವಹಿಸಿದ ಎಲ್ಲಾ ಶಾಲಾ ಮಕ್ಕಳಿಗೂ ಪ್ರಶಸ್ತಿ ಹಾಗೂ ಪ್ರಮಾಣ ಪತ್ರವನ್ನು ನೀಡಿ ಸನ್ಮಾನಿಸಿದರು ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳಿಗೆ ಶಾಲಾ ಮುಖೋಪಾಧ್ಯಾಯರಾದ ಜಿ. ಹೆಚ್.ರಾಜನಾಳ ತಮ್ಮ ಪ್ರತಿಭೆಯನ್ನು ಬೆಳೆಸಿಕೊಳ್ಳಲು ಇಂತಹ ಸ್ಪರ್ಧೆಗಳಲ್ಲಿ ಭಾಗವಹಿಸಿ ಮಕ್ಕಳು ಉತ್ತಮ ಕೀರ್ತಿಯನ್ನು ಶಾಲೆಗೆ ಹಾಗೂ ತಂದೆ ತಾಯಿಗಳಿಗೆ ತರಬೇಕೆಂದು ಶಾಲಾ ಮಕ್ಕಳಿಗೆ ಹಿತನುಡಿಗಳನ್ನು ಹೇಳಿದರು.

ಶಾಲಾ ವಿದ್ಯಾರ್ಥಿಯಾದ ಶ್ರೇಯಸ್ ಸುನಿಲ್ ಕುಮಾರ್ ಗೋಸೆಲ್ ಅಸಿಮ್ ಸಿಂದಗಿ, ಆತಿಪ್ ಜಕಾತಿ,ಪ್ರಗತಿ ಪೂಜಾರ್ ಮುಂತಾದವರು ಭಾಗವಹಿಸಿದ್ದರು ಈ ಸಂದರ್ಭದಲ್ಲಿ ಶಾಲೆ ಮುಖ್ಯೋಪಾಧ್ಯಾಯರು ಜಿ. ಹೆಚ್.ರಾಜನಾಳ ಸಂಘಟನಾ ಶಿಕ್ಷಕರು ಶ್ರೀಮತಿ ಉಮಾ ಪಾಟೀಲ್ ಉಪಸ್ಥಿತರಿದ್ದರು

# ಜನರ ಆಶೋತ್ತರಗಳಿಗೆ ಸ್ಪಂದಿಸುವ ಪಕ್ಷ ಕಾಂಗ್ರೆಸ್

ಬೆಳಗಾವಿ : ನಮ್ಮ ಸರ್ಕಾರ ಕೊಟ್ಟ ಭಾಷೆಯನ್ನು ಉಳಿಸಿಕೊಂಡಿದೆ. ಚುನಾವಣೆಗೂ ಮುನ್ನ ಘೋಷಿಸಿದ್ದ 5 ಗ್ಯಾರಂಟಿ ಯೋಜನೆಗಳನ್ನು ಮನೆ ಮನೆಗೆ ತಲುಪಿಸುವ ಕೆಲಸ ಮಾಡುತ್ತಿದ್ದೇವೆ. ತನ್ಮೂಲಕ ಕಾರ್ಯಕರ್ತರಿಗೆ ಶಕ್ತಿ ತುಂಬಿದ್ದೇವೆ ಎಂದು

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದ್ದಾರೆ. ಬೆಳಗಾವಿ ದಕ್ಷಿಣ ಕ್ಷೇತ್ರದಲ್ಲಿ ಮುಖಂಡರ ಸಭೆಯಲ್ಲಿ ಮಾತನಾಡಿದ ಸಚಿವರು, ಬೆಳಗಾವಿ ದಕ್ಷಿಣದಲ್ಲಿ ಕಾಂಗ್ರೆಸ್ ಶಾಸಕರು ಇಲ್ಲದಿದ್ದರೂ ಯಾವುದೇ ಸ್ವಾರ್ಥ ರಾಜಕಾರಣ ಮಾಡಿಲ್ಲ. ಕಾಂಗ್ರೆಸ್ ಪಕ್ಷ ಎಂದರೆ ಬದ್ಧತೆ, ಬದ್ಧತೆಗೆ ಮತ್ತೊಂದು ಹೆಸರೇ ಕಾಂಗ್ರೆಸ್ ಪಕ್ಷ. ಬಸವಣ್ಣನವರ ತತ್ವ, ಬಾಬಾ ಸಾಹೇಬ್ ಅಂಬೇಡ್ಕರ್ ಬರೆದಿರುವ ಸಂವಿಧಾನದ ಆಶಯದಂತೆ ಸರ್ಕಾರ ಕಾರ್ಯನಿರ್ವಹಿಸುತ್ತಿದೆ ಎಂದರು.

ಕಳೆದ ವಿಧಾನಸಭಾ ಚುನಾವಣೆಗೂ ಮುನ್ನ ನಾವು ಕೊಟ್ಟ ಮಾತು, ಕೊಟ್ಟ ಭರವಸೆಗಳನ್ನು ಜಾರಿಗೆ ತಂದಿದ್ದೇವೆ. ಕರ್ನಾಟಕ ಸರ್ಕಾರ ಬಂದು ಒಂಭತ್ತು ತಿಂಗಳು ಕಳೀತು. ಇದೀಗ ಮತ್ತೆ ಲೋಕಸಭಾ ಚುನಾವಣೆ ಬಂದಿದೆ. ಈ ಚುನಾವಣೆಯಲ್ಲಿ ಬೂತ್ ಮಟ್ಟದ ಕಾರ್ಯಕರ್ತರ ಜವಾಬ್ದಾರಿ ಹೆಚ್ಚಿದೆ ಎಂದು ಹೇಳಿದರು.

ಈ ಭಾಗದಲ್ಲಿ ಪಕ್ಷ ಸಂಘಟಿಸುವ ಸಲುವಾಗಿ ಸತೀಶ್ ಜಾರಕಿಹೊಳಿ ಅವರು ಬೆಳಗಾವಿ ದಕ್ಷಿಣ ಕ್ಷೇತ್ರದ ಬಗ್ಗೆ ಸಾಕಷ್ಟು ಕಾಳಜಿ ತೆಗೆದುಕೊಂಡಿದ್ದಾರೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ್ ಜಾರಕಿಹೊಳಿ, ಬೆಳಗಾವಿ ಉತ್ತರ ಕ್ಷೇತ್ರದ ಶಾಸಕ ರಾಜು ಸೇಠ್, ಯುವ ಮುಖಂಡರಾದ ಮೃಣಾಲ್ ಹೆಬ್ಬಾಳ್ಕರ್, ಜಿಲ್ಲಾಧ್ಯಕ್ಷರಾದ ವಿನಯ್ ನಾವಲಗಟ್ಟಿ, ಮಾಜಿ ಬುಡಾ ಅಧ್ಯಕ್ಷರಾದ ಯುವರಾಜ್ ಕದಂ, ಕಾರ್ಯದರ್ಶಿ ಪ್ರದೀಪ್, ಪರಶುರಾಮ್ ಢಗೆ, ಕಿರಣ್ ಪಾಟೀಲ್, ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾದ ಕಲ್ಪನಾ, ರಮೇಶ್ ಸೊಂಟಕ್ಕಿ ಸೇರಿದಂತೆ ಅನೇಕ ಮುಖಂಡರು ಉಪಸ್ಥಿತರಿದ್ದರು.

# ಜಿಲ್ಲಾ ಸಂಚಾಲಕರಾಗಿ ಮಂಹಾತೇಶ ಮಮದಾಪುರ ಆಯ್ಕೆ

ವಿಜಯಪುರ : ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ವಿಜಯಪುರ ಜಿಲ್ಲಾ ಸಂಚಾಲಕರಾಗಿ ಜುಮನಾಳ ಗ್ರಾಮದ ರೈತ ಮುಖಂಡಾರಾದ ಮಂಹಾತೇಶ ಮಮದಾಪುರ ಅವರನ್ನು ಆಯ್ಕೆ ಮಾಡಿ ಜಿಲ್ಲಾ ಕಚೇರಿಯಲ್ಲಿ ಜಿಲ್ಲಾಧ್ಯಕ್ಷರಾದ ಸಂಗಮೇಶ ಸಗರ ಅವರು ಆದೇಶ ಪ್ರತಿ ನೀಡಿದರು.

ಈ ವೇಳೆ ಜಿಲ್ಲಾಧ್ಯಕ್ಷರಾದ ಸಂಗಮೇಶ ಸಗರ ಅವರು ಆದೇಶ ಪ್ರತಿ ನೀಡಿ ಸಂಘದ ತತ್ವ ಸಿದ್ಧಾಂತಗಳಿಗೆ ಬದ್ಧವಾಗಿ, ಬಡವ ಬಲ್ಲಿದ, ಮೇಲು ಕೀಳು, ಎಂದೆನ್ನದೇ ಎಲ್ಲರನ್ನು ಪಕ್ಷಾತೀತವಾಗಿ ಜಾತ್ಯಾತೀತವಾಗಿ ಸಂಘಟನೇಯ ಸಿದ್ದಾಂತದಲ್ಲಿ ಕಾನೂನಿನ ಚೌಕಟ್ಟಿನಲ್ಲಿ ಎಲ್ಲರನ್ನು ಸಮನಾಗಿ ಕಾಣುತ್ತಾ ಯಾವುದೇ ರೈತರಿಗೆ ಅನ್ಯಾಯವಾದರೂ ತಕ್ಷಣದಲ್ಲಿ ಕಾರ್ಯಪ್ರವೃತ್ತರಾಗಬೇಕು ಹಾಗೇ ಜಿಲ್ಲೆಯ ಎಲ್ಲ ಹಳ್ಳಿಗಳಲ್ಲಿ ಗ್ರಾಮ ಘಟಕ, ತಾಲೂಕು ಘಟಕಗಳನ್ನು ಮಾಡಬೇಕು ಎಂದು ಹೇಳಿದರು

ಈ ವೇಳೆ ಜಿಲ್ಲಾ ಸಂಚಾಲಕರಾದ ರಾಮನಗೌಡ ಪಾಟೀಲ(ಬ್ಯಾಲ್ಯಾಳ), ತಾ.ಉಪಾಧ್ಯಕ್ಷರಾದ ಮಹಾದೇವಪ್ಪ ತೇಲಿ, ತಾ.ಪ್ರಧಾನ ಕಾರ್ಯದರ್ಶಿಗಳಾದ ಮಲ್ಲಿಕಾರ್ಜುನ ಗೋಡೇಕಾರ, ಮುಖಂಡರಾದ ಆನಂದ ಭೀಸೆ ಇದ್ದರು.

# ವಿದ್ಯುತ್ ಪ್ರಸರಣ: ಸಾರ್ವಜನಿಕರ ಗಮನಕ್ಕೆ

ಬೆಳಗಾವಿ,ಮಾ.20 : ಬಾಗಲಕೋಟ ಜಿಲ್ಲೆಯ ಮುಧೋಳ ತಾಲೂಕಿನಲ್ಲಿ ಚಾಲ್ತಿಯಲ್ಲಿರುವ 110/11ಕೆವಿ ಢವಳೇಶ್ವರ ವಿದ್ಯುತ್ ಉಪಕೇಂದ್ರದಿಂದ ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಅರಳಿಮಟ್ಟಿ ಗ್ರಾಮದಲ್ಲಿ ಹೊಸದಾಗಿ ನಿರ್ಮಿಸಲು ಉದ್ದೇಶಿಸಿರುವ 110/11ಕೆವಿ ವಿದ್ಯುತ್ ಕೇಂದ್ರಕ್ಕೆ ಜೋಡಿ ಗೋಪುರಗಳ ಮೇಲೆ 4.671 ಕಿ.ಮಿ ಉದ್ದದ ಒಂಟಿ ವಿದ್ಯುತ್ ಪ್ರಸರಣ ಮಾರ್ಗವನ್ನು ನಿರ್ಮಿಸಲಾಗಿದೆ, ಸದರಿ 110 ಕೆವಿ ವಿದ್ಯುತ್ ಪ್ರಸರಣ ಮಾರ್ಗವು ಢವಳೇಶ್ವರ, ಅರಳಿಮಟ್ಟಿ ಗ್ರಾಮಗಳ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿ ಹಾಯ್ದು ಹೋಗುತ್ತದೆ.

ಸದರಿ ವಿದ್ಯುತ್ ಪ್ರಸರಣ ಮಾರ್ಗವನ್ನು ಮಾ.27 ರಂದು ಇಲ್ಲವೆ ತದನಂತರ ಯಾವುದೇ ಕ್ಷಣದಲ್ಲಿ ವಿದ್ಯುತ್‌ನ್ನು ಹರಿಬಿಡಲಾಗುವದು. ಆದರಿಂದ ಸಾರ್ವಜನಕರು ವಿದ್ಯುತ್ ಗೋಪುರಗಳನ್ನು ಹತ್ತುವುದಾಗಲಿ, ತಂತಿಗಳನ್ನು ಮುಟ್ಟುವುದಾಗಲಿ ಹಸಿರು ಟೊಂಗೆಗಳನ್ನು ಎಸೆಯುವುದಾಗಲಿ ಮತ್ತು ಲೈನ್ ಕೆಳಗಡೆ ದನಕರುಗಳನ್ನು ಕಟ್ಟುವುದಾಗಲಿ, ಗಿಡಮರಗಳನ್ನು ನೆಡುವುದಾಗಲಿ, ಮನೆ/ಗುಡಿಸಲುಗಳನ್ನು ನಿರ್ಮಿಸುವುದಾಗಲಿ ಪ್ರಾಣಾಪಾಯಕವಾಗುವುದು. ಒಂದು ವೇಳೆ ಇಂತಹ ಕೃತ್ಯಗಳನ್ನು ಯಾರಾದರು ಎಸಗಿದಲ್ಲಿ ಮುಂದೆ ಒದಗಬಹುದಾದ ಅಪಾಯಗಳಿಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಜವಾಬ್ದಾರಿಯಾಗಿರುವುದಿಲ್ಲ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಬೃಹತ್ ಕಾಮಗಾರಿ ವಿಭಾಗ, ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬೆಳಗಾವಿ : ಕುವೆಂಪುನಗರದಲ್ಲಿರುವ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ನಿವಾಸದಲ್ಲಿ ಬುಧುವಾರ ಆಶಾ ಕಾರ್ಯಕರ್ತೆಯರು ಹಾಗೂ ಅಂಗನವಾಡಿ ಕಾರ್ಯಕರ್ತೆಯರನ್ನು ಕರೆದು ಸಭೆ ನಡೆಸುತ್ತಿದ್ದ ವೇಳೆ ಚುನಾವಣಾ ಅಧಿಕಾರಿಗಳು, ಪ್ಲೇಯಿಂಗ್ ಸ್ಕ್ಯಾಡ್ ಸಿಬ್ಬಂದಿ ದಾಳಿ ನಡೆಸಿದ ಘಟನೆ ನಡೆದಿದೆ.ಲೋಕಸಭಾ ಚುನಾವಣೆ ಘೋಷಣೆಯಾದ ಚುನಾವಣಾ ನೀತಿ ಸಂಹಿತೆ ಉಲ್ಲಂಘಿಸಿ 500 ಜನ ಆಶಾ, ಅಂಗನವಾಡಿ ಕಾರ್ಯಕರ್ತರೊಂದಿಗೆ ಸಭೆ ನಡೆಸಿದರು. ಸಭೆ ಮಾಡುವಾಗಲೇ ಚುನಾವಣಾ ಅಧಿಕಾರಿಗಳು, ಪ್ಲೇಯಿಂಗ್ ಸ್ಕ್ಯಾಡ್ ಸಿಬ್ಬಂದಿ ದಾಳಿ ನಡೆಸಿದ್ದಾರೆ.

# ಕಲೆಯನ್ನು ನಶಿಸಲು ಬಿಡಬೇಡಿ: ಶ್ರೀ ನಾಗೇಂದ್ರ ಸ್ವಾಮಿ



ಬೆಳಗಾವಿ: ಕಲೆಯು ನಶಿಸಿ ಹೋಗದಂತೆ ಗ್ರಾಮೀಣ ಪ್ರದೇಶಗಳಲ್ಲಿ ಬಯಲಾಟಗಳ ಮೂಲಕ ಜನರಿಗೆ ಅರಿವು ಮೂಡಿಸುವ ಕಾರ್ಯ ಸಂಘ ಸಂಸ್ಥೆಗಳು ಮತ್ತು ಸರ್ಕಾರಗಳು ಮಾಡಬೇಕೆಂದು ಬಡೆ ಕೊಳ್ಳಮಠದ ಶ್ರೀ ನಾಗೇಂದ್ರ ಸ್ವಾಮಿಗಳು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕನ್ನಡ ಸಾಂಸ್ಕೃತಿಕ ಕಲಾ ವೇದಿಕೆ ಬೈಲಹೊಂಗಲ ಇವರ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಲಾಗಿದ್ದ ಭಕ್ತಿ ಪ್ರಧಾನ ನಾಟಕ ಶ್ರೀ ಕೃಷ್ಣ ಪಾರಿಜಾತವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಲೆ, ಸಂಗೀತ, ನೃತ್ಯ ಪ್ರದರ್ಶನ ಮೂಲಕ ಜನರಿಗೆ ಸಾಮಾಜಿಕ ಅರಿವು ನೀಡುವುದರ ಮೂಲಕ ಕಲೆಯನ್ನು ಬೆಳೆಸಿ ಅದನ್ನು ಉಳಿಸಬೇಕೆಂದರು.

ಶ್ರೀ ಕೃಷ್ಣ ಪಾರಿಜಾತ ನಾಟಕ ಅಹೋ ರಾತ್ರಿ ನಡೆಯಿತು, ನಾಟಕದ ಕಲಾವಿದರನ್ನು ಶ್ರೀ ನಾಗೇಂದ್ರ ಸ್ವಾಮಿಗಳು ಸತ್ಕರಿಸಿದರು, ಕಾರ್ಯಕ್ರಮದಲ್ಲಿ ಕರ್ನಾಟಕ ಸಂಸ್ಕೃತಿಕ ಕಲಾ ವೇದಿಕೆ ಬೈಲ ಹೊಂಗಲ್ ಎಲ್ಲ ಸದಸ್ಯರು ಉಪಸ್ಥಿತರಿದ್ದರು, ನಾಟಕದ ಪ್ರಾರಂಭದಲ್ಲಿ ಸುರೇಶ್ ಕಂಠಿ ಅವರು ಸ್ವಾಗತಿಸಿದರು ಕೊನೆಗೆ ನಿರ್ಮಲ ಅವರು ವಂದಿಸಿದರು.

# ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆ: ನಿಷೇಧಾಜ್ಞೆ ಜಾರಿ

ಕೊಪ್ಪಳ, ಮಾರ್ಚ್ 20 : ಜಿಲ್ಲೆಯಲ್ಲಿ ಮಾರ್ಚ್ 25 ರಿಂದ ಏಪ್ರಿಲ್ 06 ವರೆಗೆ ನಡೆಯಲಿರುವ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಗಳು ಸುಸೂತ್ರವಾಗಿ ಮತ್ತು ದೋಷರಹಿತವಾಗಿ ನಡೆಸಲು ಅನುಕೂಲವಾಗುವಂತೆ ಹಾಗೂ ಪರೀಕ್ಷೆಯಲ್ಲಿ ಯಾವುದೇ ರೀತಿಯ ಅಕ್ರಮ, ಅವ್ಯವಹಾರ ನಡೆಯದಂತೆ ಸಿ.ಆರ್.ಪಿ.ಸಿ 1973 ಕಲಂ 144ರನ್ವಯ ಪರೀಕ್ಷಾ ಕೇಂದ್ರಗಳ ಸುತ್ತಲಿನ 200 ಮೀಟರ್ ಅಂತರದ ಪ್ರದೇಶದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾ ದಂಡಾಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರು ಆದೇಶ ಹೊರಡಿಸಿದ್ದಾರೆ.

ಕರ್ನಾಟಕ ಶಾಲಾ ಶಿಕ್ಷಣ ಮತ್ತು ಮೌಲ್ಯ ನಿರ್ಣಯ ಮಂಡಳಿ ವತಿಯಿಂದ ನಡೆಸುತ್ತಿರುವ 2024ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಗಳು ಜಿಲ್ಲೆಯ ಕೊಪ್ಪಳ-23, ಗಂಗಾವತಿ-14, ಕುಷ್ಟಗಿ-15, ಯಲಬುರ್ಗಾ-08, ಕುಕನೂರು-06, ಕಾರಟಗಿ-05 ಮತ್ತು ಕನಕಗಿರಿಯ 04 ಪರೀಕ್ಷಾ ಕೇಂದ್ರಗಳು ಸೇರಿದಂತೆ ಜಿಲ್ಲೆಯ ಒಟ್ಟು 75 ಪರೀಕ್ಷಾ ಕೇಂದ್ರಗಳಲ್ಲಿ ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 02 ಗಂಟೆಯವರೆಗೆ ನಡೆಯಲಿವೆ. ಜಿಲ್ಲಾಧಿಕಾರಿಗಳ ಆದೇಶದನ್ವಯ ಪರೀಕ್ಷಾ ಕೇಂದ್ರಗಳ ಸುತ್ತಲಿನ 200 ಮೀಟರ್ ವ್ಯಾಪ್ತಿಯಲ್ಲಿ ಯಾವುದೇ ರೀತಿಯ ಎಸ್.ಟಿ.ಡಿ., ಮೊಬೈಲ್ ಪೇಜರ್, ಝರಾಕ್ಸ್, ಟೈಪಿಂಗ್ ಮುಂತಾದವುಗಳನ್ನು ನಿಷೇಧಿಸಲಾಗಿದೆ. ಪರೀಕ್ಷಾ ಕೇಂದ್ರದಲ್ಲಿ ಪ್ರವೇಶ ಪತ್ರ ಪಡೆದ ವಿದ್ಯಾರ್ಥಿಗಳು ಹಾಗೂ ನಿಯೋಜಿತ ಶಿಕ್ಷಕರನ್ನು, ಜಾಗೃತ ದಳದವರನ್ನು ಹೊರತುಪಡಿಸಿ ಇನ್ನುಳಿದವರಿಗೆ ಪರವಾನಗೆ ಇಲ್ಲದೇ ಪರೀಕ್ಷಾ ಕೇಂದ್ರದಲ್ಲಿ ಪ್ರವೇಶ ಮಾಡುವುದನ್ನು ನಿಷೇಧಿಸಲಾಗಿದೆ. ನಕಲು ಮಾಡುವ ಸಾಮಗ್ರಿಗಳನ್ನು ಹಾಗೂ ಹೊರಗಿನಿಂದ ಕಾಪಿ ಬರೆದು ಪರೀಕ್ಷಾ ಕೇಂದ್ರಗಳಲ್ಲಿ ಪೂರೈಸುವುದನ್ನು ನಿರ್ಬಂಧಿಸಲಾಗಿದೆ. 200 ಮೀಟರ್ ಪರೀಕ್ಷಾ ಕೇಂದ್ರಗಳ ಸುತ್ತಲೂ ಜನರು ಮಾರಕಾಸ್ತ್ರಗಳನ್ನು ಹಿಡಿದು ತಿರುಗಾಡುವುದನ್ನು ನಿಷೇಧಿಸಿದೆ.

ಈ ಆದೇಶವು ಮದುವೆ, ಶವ ಸಂಸ್ಕಾರಗಳು ಹಾಗೂ ಇನ್ನಿತರ ಧಾರ್ಮಿಕ ಕಾರ್ಯಕ್ರಮಗಳಿಗೆ ಅನ್ವಯವಾಗುವುದಿಲ್ಲ ಎಂದು ಜಿಲ್ಲಾಧಿಕಾರಿಗಳು ತಮ್ಮ ಆದೇಶದಲ್ಲಿ ತಿಳಿಸಿದ್ದಾರೆ.

## ಲಿಂಗಾಯತ ಮಹಿಳಾ ಸಮಾಜದಿಂದ ಮಹಿಳಾ ಸಾಧಕಿಯರಿಗೆ ಸನ್ಮಾನ

# ಮಹಿಳೆಯರು ಆರ್ಥಿಕವಾಗಿ ಸದೃಢರಾಗಿ; ಮುಕ್ತಾಂಬ ಬಸವರಾಜ



ಬೆಳಗಾವಿ: ಮಹಿಳೆಯರು ಸಬಲರಾಗಿರುವ ಸಮಾಜ ಅತ್ಯಂತ ಬಲಿಷ್ಠ ಸಮಾಜವಾಗಲಿದೆ. ಹಾಗಾಗಿ ಪ್ರತಿಯೊಬ್ಬರೂ ಆರ್ಥಿಕವಾಗಿ ಸದೃಢರಾಗಬೇಕು ಎಂದು ರಾಜ್ಯ ಮಹಿಳಾ ಘಟಕದ ಪ್ರಧಾನ ಕಾರ್ಯದರ್ಶಿ ಮುಕ್ತಾಂಬ ಬಸವರಾಜ ಹೇಳಿದರು.

ಇಲ್ಲಿನ ಕನ್ನಡ ಭವನದಲ್ಲಿ ಲಿಂಗಾಯತ ಮಹಿಳಾ ಸಮಾಜ, ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಲೇಖಕಿಯರ ಸಂಘ ವತಿಯಿಂದ ಆಯೋಜಿಸಲಾದ ಮಹಿಳಾ ದಿನಾಚರಣೆ ಸ್ತ್ರೀ-ಶಕ್ತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.ಸ್ತ್ರೀ ಶಕ್ತಿ ಸಂಘಟನೆಗಳು ಸಮಾಜದಲ್ಲಿ ಗಟ್ಟಿಯಾಗಿ ನೆಲೆ ನಿಂತಾಗ ಮಾತ್ರ ಸಮಾಜವೂ ಸುಧಾರಣೆ ಹೊಂದಲು ಸಾಧ್ಯ. ಸ್ವ ಉದ್ಯೋಗ ಮೂಲಕ ಮಹಿಳೆಯರು ಹತ್ತಾರು ಜನರಿಗೆ ನೆರವಾಗುತ್ತಿದ್ದಾರೆ. ಎಲ್ಲಾ ರಂಗದಲ್ಲಿ ಬೆಳೆಯುತ್ತಿರುವುದು ಹೆಮ್ಮೆಯ ವಿಷಯ ಎಂದರು. ವೈರಾಗ್ಯದ ಪ್ರತೀಕವಾಗಿರುವ ಮಹಾನ್ ಶರಣೆ ಅಕ್ಕಮಹಾದೇವಿ ಮಹಿಳೆಯರಿಗೆ ಮಾತ್ರವಲ್ಲ, ಇಡೀ ಮನುಕುಲಕ್ಕೆ ಮಾದರಿಯಾಗಿದ್ದಾರೆ. ಸಮಾಜದಲ್ಲಿನ ಅಂಕುಡೊಂಕುಗಳನ್ನು ತಿದ್ದುವ ಮೂಲಕ ಸಮಾಜದ ಕಣ್ಣು ತೆರೆಸಿದ ಶರಣೆ ಅಕ್ಕಮಹಾದೇವಿಯವರು.

ಜೀವನದಲ್ಲಿ ಆಸ್ತಿ, ಅಂತಸ್ತಿನ ಅಂಹಕಾರವನ್ನು ಬಿಟ್ಟು ಪ್ರತಿಯೊಬ್ಬರೂ ಸರಳ ಜೀವನ ಸಾಗಿಸಬೇಕು.

ಆಸ್ತಿ ಮಾಡಬೇಕೆಂಬ ಹಂಬಲದಲ್ಲಿ ಜೀವನ ಮೌಲ್ಯಗಳನ್ನು ಕಳೆದುಕೊಂಡಿದ್ದೇವೆ. ಅಧರ್ಮದಿಂದ ಸಂಪಾದಿಸಿದ್ದು, ಕಾಲಾ ನಂತರದಲ್ಲಿ ಅಧಃಪತನ ಹೊಂದುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ಆಧ್ಯಾತ್ಮದೆಡೆಗೆ ಸಾಗಬೇಕು ಹೇಳಿದರು.ಲೇಖಿಕಿಯರ ಸಂಘಟನೆಯು ಬರವಣಿಗೆ ಮೂಲಕವೇ ಸಮಾಜದ ಕಣ್ತೆರಿಸುವ ಪ್ರಯತ್ನ ಮಾಡುತ್ತಿದೆ. ಮಹಿಳಾ ಸಂಘಟನೆ ಇಷ್ಟೊಂದು ಬೆಳೆದಿರುವುದು ಸಂತಸ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.ರಂಗ ನಿರ್ದೇಶಕಿ ಜನಪದ ಗಾಯಕಿ ವೀಶ್ವೇಶ್ವರಿ ಬಸಲಿಂಗಯ್ಯ ಹಿರೇಮಠ ಮಾತನಾಡಿ, ಸಮಾಜ ಸುಧಾರಣೆಗೆ ಮಹಿಳೆಯರು ಅಪಾರ ಕೊಡುಗೆ ನೀಡಿದ್ದಾರೆ. ಶಿಕ್ಷಣ ಇಲ್ಲದ ಕಾಲಘಟ್ಟದಲ್ಲಿ ಅಕ್ಷರ ಜ್ಞಾನವನ್ನು ಉಣಬಡಿಸಿದವರು ಮಹಿಳೆಯರು ಎಂದರು.ನಾವು ನೆಮ್ಮದಿಯಿಂದ ಜೀವನ ಸಾಗಿಸಬೇಕಾದರೆ ಮಹಿಳೆಯರನ್ನು ಗೌರವಯುತ್ತವಾಗಿ ಕಾಣಬೇಕಿದೆ.

ಪೋಷಕರು ಮಕ್ಕಳಿಗೆ ಶಿಕ್ಷಣ ಕೊಡಿಸುವುದು ಅಷ್ಟೇ ಅಲ್ಲ ಉತ್ತಮ ಸಂಸ್ಕಾರ ನೀಡಿ, ಗುರು- ಹಿರಿಯರ ಜತೆ ಹೇಗೆ ಬೆರೆತುಕೊಳ್ಳಬೇಕು ಎಂಬ ಮನೋಭಾವನೆ ಕಲಿಸಬೇಕು ಎಂದರು. ಈ ವೇಳೆ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಮಹಿಳಾ ಸಾಧಕರಿಗೆ ಲಿಂಗಾಯತ ಮಹಿಳಾ ಸಮಾಜ, ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಲೇಖಕಿಯರ ಸಂಘಟನ ವತಿಯಿಂದ ಸನ್ಮಾನಸಲಾಯಿತು.

ಈ ಕಸಾಪ ಅಧ್ಯಕ್ಷೇ ಮಂಗಲಾ ಮೆಟಗುಡ್ , ರಂಗ ನಿರ್ದೇಶಕಿ ಜನಪದ ಗಾಯಕಿ ವೀಶ್ವೇಶ್ವರಿ ಬಸಲಿಂಗಯ್ಯ ಹಿರೇಮಠ , ಪ್ರಾಧ್ಯಾಪಕಿ ಇ.ಸಿ ವಿನೀತಾ ಗೆಜ್ಜೆ, ಶೈಲಜಾ ಭಿಂಗೆ,ಜಿಲ್ಲಾ ಲೇಖಕಿಯ ಸಂಘದ ಅಧ್ಯಕ್ಷೆ ಜಯಶೀಲಾ ಬ್ಯಾಕೋಡ ಆಶಾ ಕಡಪಟ್ಟಿ, ನೈನಾ ಗಿರಿಗೌಡರ, ಕಾವೇರಿ ಕೀಲಾರಿ ಹಾಗೂ ಇತತರು ಇದ್ದರು.

# ಮಹಾಮನೆ ಕಾರ್ಯಕ್ರಮ

ಹುಬ್ಬಳ್ಳಿ: ಬಸವೇಶ್ವರ ನಗರದಕೆ.ಎಂ.ಕುದರಿಅವರ ಮನೆಯಲ್ಲಿ ಬಸವಕೇಂದ್ರದ ಮನೆಯಲ್ಲಿ ಮಹಾಮನೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕೆ.ಎಲ್.ಇ ಸಂಸ್ಥೆಯ, ಜಗದ್ಗುರುಗಂಗಾಧರ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಅಧೀಕ್ಷರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ 90 ವರ್ಷದ ಕಾಶಿನಾಥ ಮಲಕಪ್ಪ ಕುದರಿ ಅವರು ಬಸವಕೇಂದ್ರದಕಟ್ಟಡಕಾಮಗಾರಿ ಹಾಗೂ ಕಾರ್ಯಚಟುವಟಿಕೆಗಳಿಗೆ ಇಪ್ಪತ್ತೊಂದು ಸಾವಿರ ರೂಪಾಯಿಗಳನ್ನು ದೇಣಿಗೆಯಾಗಿ ಬಸವ ಕೇಂದ್ರದಅಧ್ಯಕ್ಷ ಪ್ರೊ ಜಿ.ಬಿ.ಹಳ್ಯಾಳ ಅವರಿಗೆಚೆಕ್ ಮೂಲಕ ಹಸ್ತಾಂತರಿಸಿದರು. ಬಸವ ಕೇಂದ್ರದಉಪಾಧ್ಯಕ್ಷಡಾ.ಸ್ನೇಹಾ ಭೂಸನೂರಅವರುಅನುಭಾವ ನೀಡಿದರು. ಬಸವ ಪರಿಸರ ಸಂರಕ್ಷಣಾ ಸಮಿತಿಯ ಕಾರ್ಯದರ್ಶಿ ಹಾಗೂ ಗ್ರಂಥಪಾಲಕಡಾ. ಸುರೇಶ ಡಿ. ಹೊರಕೇರಿ, ಹಿರಿಯರಾದ ನೀಲಕಂಠಅಸೂಟಿ, ಪ್ರೊ ಜಿ.ಬಿ.ಹಳ್ಯಾಳ, ಡಾ. ಪ್ರಕಾಶ ಮುನ್ನೋಳಿ, ಅನಸೂಯಾಕುದರಿ, ಸೀಮಾ ಕುದರಿ, ಶಾಂತಾ ಪಟ್ಟಣಶೆಟ್ಟಿ, ಎನ್.ಬಿ.ಶಾಗೋಟಿ, ಎಸ್.ಎಸ್.ಪಾಟೀಲ, ಗದಿಗೆಪ್ಪಎಂ.ಕುದರಿ, ಉದಯ ಸಾಂಬ್ರಾಣಿಕರ, ಸುನಂದಾ ಶಾಗೋಟಿ, ರತ್ನಾಅಸೂಟಿ, ಜೆ.ಬಿ.ಶಿರೋಳಕರ, ಮಧುಮತಿ ಕುದರಿ, ರಾಚಕ್ಕಕುದರಿ, ಜಯಶ್ರೀ ಡಿ. ಹಿರೇಗೌಡರ, ಶಶಿಕಲಾ ಕೊಡೆಕಲ್, ಅನ್ನಪೂರ್ಣತೊರಗಲ್, ಎಸ್.ಡಿ. ಮದೂರಕರ, ಮುಂತಾದವರು ಇದ್ದರು.

GADI KANNADIGA,kannada daily, printed, published , edited, & woned by murugesh b.shivapuji ,printed ,plot no:12,sy no:174/3b,press colony,kuvempu nagar, post:hindalaga-591108,Tq & Dt:belgaum, And published at plot no:12,sy no:174/3b,press colony,kuvempu nagar,post:hindalaga-591108,Tq & Dt:belgaum, karnataka, RNI NO:KAR KAN/2003/10452. Permission to post at Belagavi, Kacheri post office Belagavi. No:PMG/KA/NK/BM/743/24-26